"ಮಧುರ ಮಕ್ಕಳೇ - ಈ ಸಂಗಮಯುಗವು ಸರ್ವೋತ್ತಮರಾಗುವ ಶುಭ ಸಮಯವಾಗಿದೆ ಏಕೆಂದರೆ ಈ ಸಮಯದಲ್ಲಿಯೇ ತಂದೆಯು ನಿಮಗೆ ನರನಿಂದ ನಾರಾಯಣನಾಗುವ ವಿದ್ಯೆಯನ್ನು ಓದಿಸುತ್ತಾರೆ"

ಪ್ರಶ್ನೆ: ನೀವು ಮಕ್ಕಳ ಬಳಿ ಇಂತಹ ಯಾವ ಜ್ಞಾನವಿದೆ, ಅದರ ಕಾರಣದಿಂದ ನೀವು ಯಾವುದೇ ಪರಿಸ್ಥಿತಿಯಲ್ಲಿ ಅಳುವುದಿಲ್ಲ?

ಉತ್ತರ: ನಿಮ್ಮ ಬಳಿ ಈ ಮಾಡಿ-ಮಾಡಲ್ಪಟ್ಟಿರುವ ನಾಟಕದ ಜ್ಞಾನವಿದೆ. ನೀವು ತಿಳಿದುಕೊಂಡಿದ್ದೀರಿ - ಇದರಲ್ಲಿ ಪ್ರತಿಯೊಂದು ಆತ್ಮನಿಗೆ ತನ್ನದೇ ಆದ ಪಾತ್ರವಿದೆ. ತಂದೆಯು ನಮಗೆ ಸುಖದ ಆಸ್ತಿಯನ್ನು ಕೊಡುತ್ತಿದ್ದಾರೆ ಅಂದಮೇಲೆ ಅಳುವುದಕ್ಕೆ ಹೇಗೆ ಸಾಧ್ಯ! ಪರಲೋಕದಲ್ಲಿರುವ ಪರಮಾತ್ಮನನ್ನು ಪಡೆಯುವ ಚಿಂತೆಯಿತ್ತು, ಅವರು ಸಿಕ್ಕಿ ಬಿಟ್ಟರು ಅಂದಮೇಲೆ ಇನ್ನೇನು ಬೇಕು? ಅದೃಷ್ಟವಂತ ಮಕ್ಕಳು ಎಂದೂ ಅಳುವುದಿಲ್ಲ.

ಓಂ ಶಾಂತಿ. ಆತ್ಮಿಕ ತಂದೆಯು ಕುಳಿತು ಮಕ್ಕಳಿಗೆ ಒಂದು ಮಾತನ್ನು ತಿಳಿಸುತ್ತಾರೆ. ಚಿತ್ರಗಳಲ್ಲಿಯೂ ಸಹ ಹೀಗೆ ಬರೆಯಬೇಕು - ತ್ರಿಮೂರ್ತಿ ಶಿವ ತಂದೆಯು ಮಕ್ಕಳ ಪ್ರತಿ ತಿಳಿಸುತ್ತಾರೆ, ನೀವೂ ಸಹ ಯಾರಿಗಾದರೂ ತಿಳಿಸುತ್ತೀರೆಂದರೆ ಶಿವ ತಂದೆಯು ಹೀಗೆ ಹೇಳುತ್ತಾರೆಂದು ನೀವು ಹೇಳುತ್ತೀರಿ. ಈ ತಂದೆ (ಬ್ರಹ್ಮಾ) ಯೂ ಹೇಳುತ್ತಾರೆ – ಶಿವ ತಂದೆಯು ನಿಮಗೆ ತಿಳಿಸುತ್ತಾರೆ, ಇಲ್ಲಿ ಮನುಷ್ಯರು ಮನುಷ್ಯರಿಗೆ ತಿಳಿಸುವುದಿಲ್ಲ. ಪರಮಾತ್ಮನು ಆತ್ಮಗಳಿಗೆ ತಿಳಿಸುತ್ತಾರೆ ಅಥವಾ ಆತ್ಮವು ಆತ್ಮನಿಗೆ ತಿಳಿಸುತ್ತದೆ. ಜ್ಞಾನ ಸಾಗರನು ಶಿವ ತಂದೆಯೇ ಆಗಿದ್ದಾರೆ, ಅವರು ಆತ್ಮಿಕ ತಂದೆಯಾಗಿದ್ದಾರೆ. ಈ ಸಮಯದಲ್ಲಿ ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯಿಂದ ಆಸ್ತಿಯು ಸಿಗುತ್ತದೆ. ದೇಹ-ಅಹಂಕಾರವನ್ನು ಇಲ್ಲಿ ಬಿಡಬೇಕಾಗುತ್ತದೆ. ಈ ಸಮಯದಲ್ಲಿ ನೀವು ದೇಹೀ-ಅಭಿಮಾನಿಯಾಗಿ ತಂದೆಯನ್ನು ನೆನಪು ಮಾಡಬೇಕಾಗಿದೆ. ಕರ್ಮವನ್ನು ಭಲೆ ಮಾಡಿ, ಉದ್ಯೋಗ-ವ್ಯವಹಾರಗಳನ್ನು ನಡೆಸುತ್ತಾ ಇರಿ ಆದರೆ ಸಮಯವು ಸಿಕ್ಕಿದರೆ ಸಾಕು ತನ್ನನ್ನು ಆತ್ಮನೆಂದು ತಿಳಿದು ತಂದೆಯನ್ನು ನೆನಪು ಮಾಡಿ ಆಗ ವಿಕರ್ಮಗಳು ವಿನಾಶವಾಗುತ್ತವೆ. ಶಿವ ತಂದೆಯು ಇವರಲ್ಲಿ ಬಂದಿದ್ದಾರೆಂದು ನಿಮಗೆ ತಿಳಿದಿದೆ. ಅವರು ಸತ್ಯ, ಚೈತನ್ಯನಾಗಿದ್ದಾರೆ. ಸತ್ಚಿತ್ ಆನಂದ ಸ್ವರೂಪನೆಂದು ಹೇಳುತ್ತಾರೆ. ಬ್ರಹ್ಮಾ, ವಿಷ್ಣು, ಶಂಕರ ಅಥವಾ ಯಾವುದೇ ಮನುಷ್ಯ ಮಾತ್ರರಿಗೆ ಈ ಮಹಿಮೆಯಿಲ್ಲ. ಸರ್ವ ಶ್ರೇಷ್ಠ ಭಗವಂತನು ಅವರೊಬ್ಬರೇ ಆಗಿದ್ದಾರೆ, ಅವರು ಪರಮ ಆತ್ಮನಾಗಿದ್ದಾರೆ. ಈ ಜ್ಞಾನವು ನಿಮಗೆ ಕೇವಲ ಈ ಸಮಯದಲ್ಲಿಯೇ ಇದೆ, ಮತ್ತೆಂದಿಗೂ ಸಿಗುವುದಿಲ್ಲ. ನಿಮ್ಮನ್ನು ಆತ್ಮಾಭಿಮಾನಿಗಳನ್ನಾಗಿ ಮಾಡಿ ತಂದೆಯೊಂದಿಗೆ ಬುದ್ಧಿಯೋಗ ಜೋಡಿಸಲು ಪ್ರತೀ 5000 ವರ್ಷಗಳ ನಂತರ ತಂದೆಯು ಬರುತ್ತಾರೆ, ಇದರಿಂದ ನೀವು ತಮೋಪ್ರಧಾನರಿಂದ ಸತೋಪ್ರಧಾನರಾಗುತ್ತೀರಿ. ಮತ್ತ್ಯಾವುದೇ ಉಪಾಯವಿಲ್ಲ. ಹೇ ಪತಿತ-ಪಾವನ ಬನ್ನಿ ಎಂದು ಭಲೆ ಮನುಷ್ಯರು ಕರೆಯುತ್ತಾರೆ ಆದರೆ ಅರ್ಥವನ್ನು ತಿಳಿದುಕೊಂಡಿಲ್ಲ. ಪತಿತ-ಪಾವನ ಸೀತಾರಾಂ ಎಂದು ಹೇಳಿದರೂ ಸರಿಯೇ ಇದೆ. ನೀವೆಲ್ಲರೂ ಸೀತೆಯರು ಅಥವಾ ಭಕ್ತಿನಿಯರಾಗಿದ್ದೀರಿ. ಒಬ್ಬ ರಾಮನು ಭಗವಂತನಾಗಿದ್ದಾರೆ, ನೀವು ಭಕ್ತರಿಗೆ ಭಗವಂತನ ಮೂಲಕ ಭಕ್ತಿಯ ಫಲವು ಬೇಕಾಗಿದೆ. ಆ ಫಲವು ಮುಕ್ತಿ-ಜೀವನ್ಮುಕ್ತಿಯಾಗಿದೆ. ಮುಕ್ತಿ-ಜೀವನ್ಮುಕ್ತಿಯ ದಾತನು ಅವರೊಬ್ಬರೇ ಆಗಿದ್ದಾರೆ. ಡ್ರಾಮಾದಲ್ಲಿ ಶ್ರೇಷ್ಠಾತಿ ಶ್ರೇಷ್ಠ ಪಾತ್ರದವರೂ ಇರುತ್ತಾರೆ, ಕನಿಷ್ಠ ಪಾತ್ರದವರೂ ಇರುತ್ತಾರೆ. ಇದು ಬೇಹದ್ದಿನ ನಾಟಕವಾಗಿದೆ. ಇದನ್ನು ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ನೀವು ಈ ಸಮಯದಲ್ಲಿ ತಮೋಪ್ರಧಾನ, ಕನಿಷ್ಟರಿಂದ ಸತೋಪ್ರಧಾನ ಪುರುಷೋತ್ತಮರಾಗುತ್ತಿದ್ದೀರಿ. ಸತೋಪ್ರಧಾನರಿಗೆ ಸರ್ವೋತ್ತಮರೆಂದು ಹೇಳಲಾಗುತ್ತದೆ. ಈ ಸಮಯದಲ್ಲಿ ನೀವು ಸರ್ವೋತ್ತಮರಲ್ಲ. ತಂದೆಯು ನಿಮ್ಮನ್ನು ಸರ್ವೋತ್ತಮರನ್ನಾಗಿ ಮಾಡುತ್ತಾರೆ. ಈ ಡ್ರಾಮಾದ ಚಕ್ರವು ಹೇಗೆ ಸುತ್ತುತ್ತಿರುತ್ತದೆ ಎಂಬುದು ಯಾರಿಗೂ ತಿಳಿದಿಲ್ಲ. ಕಲಿಯುಗ, ಸಂಗಮಯುಗ ನಂತರ ಸತ್ಯಯುಗ ಬರುತ್ತದೆ. ಹಳೆಯದನ್ನು ಹೊಸದನ್ನಾಗಿ ಯಾರು ಮಾಡುತ್ತಾರೆ? ತಂದೆಯ ವಿನಃ ಮತ್ತ್ಯಾರೂ ಮಾಡಲು ಸಾಧ್ಯವಿಲ್ಲ. ತಂದೆಯೇ ಸಂಗಮದಲ್ಲಿ ಬಂದು ಓದಿಸುತ್ತಾರೆ. ತಂದೆಯು ಸತ್ಯಯುಗದಲ್ಲಾಗಲಿ, ಕಲಿಯುಗದಲ್ಲಾಗಲಿ ಬರುವುದಿಲ್ಲ. ತಂದೆಯು ತಿಳಿಸುತ್ತಾರೆ - ನನ್ನ ಪಾತ್ರವೇ ಸಂಗಮದಲ್ಲಿದೆ ಆದ್ದರಿಂದ ಸಂಗಮಯುಗವು ಕಲ್ಯಾಣಕಾರಿ ಯುಗವೆಂದು ಹೇಳಲಾಗುತ್ತದೆ. ಇದು ಅಧಿಕ ಯುಗವಾಗಿದೆ, ಬಹಳ ಶ್ರೇಷ್ಠ, ಶುಭ ಸಮಯದ ಸಂಗಮಯುಗವಾಗಿದೆ. ಈ ಸಮಯದಲ್ಲಿಯೇ ತಂದೆಯು ಬಂದು ನೀವು ಮಕ್ಕಳನ್ನು ನರನಿಂದ ನಾರಾಯಣರನ್ನಾಗಿ ಮಾಡುತ್ತಾರೆ. ಮನುಷ್ಯರು ಮನುಷ್ಯರೇ ಆಗಿದ್ದಾರೆ ಆದರೆ ದೈವೀ ಗುಣವಂತರಾಗುತ್ತಾರೆ, ಅದಕ್ಕೆ ಆದಿ ಸನಾತನ ದೇವಿ-ದೇವತಾ ಧರ್ಮವೆಂದು ಹೇಳಲಾಗುವುದು. ತಂದೆಯು ತಿಳಿಸುತ್ತಾರೆ - ನಾನು ಈ ಧರ್ಮ ಸ್ಥಾಪನೆ ಮಾಡುತ್ತೇನೆ, ಇದಕ್ಕಾಗಿ ಖಂಡಿತವಾಗಿ ಪವಿತ್ರರಾಗಬೇಕಾಗುತ್ತದೆ. ಪತಿತ-ಪಾವನನು ಒಬ್ಬರೇ ತಂದೆಯಾಗಿದ್ದಾರೆ, ಉಳಿದೆಲ್ಲರೂ ವಧುಗಳು, ಭಕ್ತಿನಿಯರಾಗಿದ್ದೀರಿ. ಪತಿತ-ಪಾವನ ಸೀತಾರಾಂ ಎಂದು ಹೇಳುವುದೂ ಸಹ ಸರಿಯಾಗಿದೆ ಆದರೆ ಕೊನೆಯಲ್ಲಿ ರಘುಪತಿ ರಾಘವ ರಾಜಾರಾಂ ಎಂದು ಹೇಳಿ ಬಿಡುತ್ತಾರೆ, ಇದು ತಪ್ಪಾಗಿದೆ. ಅರ್ಥವಿಲ್ಲದೆ ಮನುಷ್ಯರು ಏನು ಬಂದರೆ ಅದನ್ನು ಹೇಳಿ ಬಿಡುತ್ತಾರೆ, ಅದೇ ಗುಂಗಿನಲ್ಲಿರುತ್ತಾರೆ. ನಿಮಗೆ ತಿಳಿದಿದೆ - ಈಗ ಚಂದ್ರವಂಶಿ ಧರ್ಮವು ಸ್ಥಾಪನೆಯಾಗುತ್ತಿದೆ.

ತಂದೆಯು ಬಂದು ಬ್ರಾಹ್ಮಣ ಕುಲವನ್ನು ಸ್ಥಾಪನೆ ಮಾಡುತ್ತಾರೆ. ಇದಕ್ಕೆ ಬ್ರಾಹ್ಮಣರ ರಾಜಧಾನಿಯೆಂದು ಹೇಳುವುದಿಲ್ಲ, ಇದು ಪರಿವಾರವಾಗಿದೆ. ಪಾಂಡವರಿಗಾಗಲಿ, ಕೌರವರಿಗಾಗಲಿ ಇಲ್ಲಿ ರಾಜ್ಯವಿಲ್ಲ. ಯಾರು ಗೀತೆಯನ್ನು ಓದಿರುವರೋ ಅವರಿಗೆ ಈ ಮಾತುಗಳು ಬಹು ಬೇಗನೆ ಅರ್ಥವಾಗುತ್ತದೆ. ಇದು ಗೀತೆಯಾಗಿದೆ, ಅಂದಾಗ ಯಾರು ತಿಳಿಸುತ್ತಾರೆ? ಸ್ವಯಂ ಭಗವಂತ. ನೀವು ಮಕ್ಕಳು ಮೊಟ್ಟ ಮೊದಲನೆಯದಾಗಿ ಇದೇ ತಿಳುವಳಿಕೆಯನ್ನು ಕೊಡಬೇಕು - ಗೀತೆಯ ಭಗವಂತ ಯಾರು? ಕೃಷ್ಣ ಭಗವಾನುವಾಚವೆಂದು ಅವರು ಹೇಳುತ್ತಾರೆ ಆದರೆ ಕೃಷ್ಣನಿರುವುದೇ ಸತ್ಯಯುಗದಲ್ಲಿ, ಅವರಲ್ಲಿ ಯಾವ ಆತ್ಮನಿದೆಯೋ ಅದು ಅವಿನಾಶಿಯಾಗಿದೆ. ಶರೀರದ ಹೆಸರೇ ಬದಲಾಗುತ್ತದೆ. ಆತ್ಮನ ಹೆಸರು ಎಂದಿಗೂ ಬದಲಾಗುವುದಿಲ್ಲ. ಶ್ರೀಕೃಷ್ಣನ ಆತ್ಮನ ಶರೀರವು ಸತ್ಯಯುಗದಲ್ಲಿಯೇ ಇರುತ್ತದೆ, ಅವರೇ ನಂಬರ್ವನ್ನಲ್ಲಿ ಬರುತ್ತಾರೆ. ಲಕ್ಷ್ಮೀ-ನಾರಾಯಣರು ನಂಬರ್ವನ್ ಆಗಿದ್ದಾರೆ ನಂತರ ಎರಡನೆಯವರು, ಮೂರನೆಯವರು ಬರತೊಡಗುತ್ತಾರೆ. ಅವರ ಅಂಕಗಳೂ ಸಹ ಅಷ್ಟೇ ಕಡಿಮೆಯಾಗುತ್ತವೆ. ಈಗ ಮಾಲೆಯು ತಯಾರಾಗುತ್ತದೆಯಲ್ಲವೆ. ತಂದೆಯು ತಿಳಿಸಿದ್ದಾರೆ, ರುಂಡ ಮಾಲೆಯೂ ಇರುತ್ತದೆ ಮತ್ತು ರುದ್ರ ಮಾಲೆಯೂ ಇರುತ್ತದೆ. ವಿಷ್ಣುವಿನ ಕೊರಳಿನಲ್ಲಿ ರುಂಡ ಮಾಲೆಯನ್ನು ತೋರಿಸುತ್ತಾರೆ. ನೀವು ಮಕ್ಕಳು ನಂಬರ್ವಾರ್ ವಿಷ್ಣು ಪುರಿಯ ಮಾಲೀಕರಾಗುತ್ತೀರಿ ಅಂದಾಗ ನೀವು ವಿಷ್ಣುವಿನ ಕೊರಳಿನ ಹಾರವಾಗುತ್ತೀರಿ. ಮೊಟ್ಟ ಮೊದಲಿಗೆ ಶಿವನ ಕೊರಳಿನ ಹಾರವಾಗುತ್ತೀರಿ, ಇದಕ್ಕೆ ರುದ್ರ ಮಾಲೆಯೆಂದು ಹೇಳಲಾಗುತ್ತದೆ, ಭಕ್ತರು ಅದನ್ನು ಜಪಿಸುತ್ತಾರೆ. ಮಾಲೆಗೆ ಪೂಜೆ ಮಾಡಲಾಗುವುದಿಲ್ಲ, ಅದನ್ನು ಸ್ಮರಣೆ ಮಾಡುತ್ತಾರೆ. ಯಾರು ವಿಷ್ಣು ಪುರಿಯ ರಾಜಧಾನಿಯಲ್ಲಿ ನಂಬರ್ವಾರ್ ಬರುತ್ತಾರೆಯೋ ಅವರೇ ಮಾಲೆಯ ಮಣಿಯಾಗುತ್ತಾರೆ. ಮಾಲೆಯಲ್ಲಿ ಎಲ್ಲದಕ್ಕಿಂತಲೂ ಮೊದಲು ಹೂವಿರುತ್ತದೆ ನಂತರ ಜೋಡಿ ಮಣಿಗಳು, ಪ್ರವೃತ್ತಿ ಮಾರ್ಗವಲ್ಲವೆ. ಪ್ರವೃತ್ತಿ ಮಾರ್ಗವು ಬ್ರಹ್ಮಾ, ಸರಸ್ವತಿ ಮತ್ತು ಮಕ್ಕಳಿಂದ ಆರಂಭವಾಗುತ್ತದೆ, ಇವರೇ ಮತ್ತೆ ದೇವತೆಯಾಗುತ್ತಾರೆ. ಲಕ್ಷ್ಮೀ-ನಾರಾಯಣರು ಮೊಟ್ಟ ಮೊದಲಿಗರಾಗುತ್ತಾರೆ. ಮಾಲೆಯಲ್ಲಿ ಮೇಲ್ಭಾಗದಲ್ಲಿ ಶಿವ ತಂದೆಯ ಸಂಕೇತವಾಗಿ ಹೂವಿದೆ, ಮಾಲೆಯನ್ನು ಜಪಿಸುತ್ತಾ-ಜಪಿಸುತ್ತಾ ಕೊನೆಯಲ್ಲಿ ತಲೆ ಬಾಗುತ್ತಾರೆ. ಶಿವ ತಂದೆಯು ಹೂವಾಗಿದ್ದಾರೆ, ಅವರು ಪುನರ್ಜನ್ಮದಲ್ಲಿ ಬರುವುದಿಲ್ಲ. ಇವರಲ್ಲಿ (ಬ್ರಹ್ಮಾ) ಪ್ರವೇಶ ಮಾಡುತ್ತಾರೆ, ಅವರೇ ನಿಮಗೆ ತಿಳಿಸಿ ಕೊಡುತ್ತಾರೆ. ಈ ಶರೀರಕ್ಕೂ ತನ್ನದೇ ಆದ ಆತ್ಮವಿದೆ, ಅದು ತನ್ನ ಶರೀರ ನಿರ್ವಹಣೆ ಮಾಡುತ್ತದೆ. ಕೇವಲ ಜ್ಞಾನವನ್ನು ಕೊಡುವುದು ಅವರ ಕರ್ತವ್ಯವಾಗಿದೆ. ಹೇಗೆ ಯಾರದೇ ಸ್ತ್ರೀ ಅಥವಾ ತಂದೆ ಮೊದಲಾದವರು ಮರಣ ಹೊಂದಿದರೆ ಬ್ರಾಹ್ಮಣರ ತನುವಿನಲ್ಲಿ ಆ ಆತ್ಮವನ್ನು ಕರೆಸುತ್ತಾರೆ. ಮೊದಲು ಆತ್ಮವು ಬರುತ್ತಿತ್ತು ಆದರೆ ಅದು ಯಾವುದೇ ಶರೀರವನ್ನು ಬಿಟ್ಟು ಬರುವುದಿಲ್ಲ. ಇದೆಲ್ಲವೂ ನಾಟಕದಲ್ಲಿ ಮೊದಲಿನಿಂದಲೇ ನಿಗಧಿಯಾಗಿದೆ. ಇದೆಲ್ಲವೂ ಭಕ್ತಿಮಾರ್ಗವಾಗಿದೆ. ಆ ಆತ್ಮವಂತೂ ಹೋಯಿತು, ಹೋಗಿ ಇನ್ನೊಂದು ಶರೀರವನ್ನು ತೆಗೆದುಕೊಂಡಿತು. ನೀವು ಮಕ್ಕಳಿಗೆ ಈಗ ಇಡೀ ಜ್ಞಾನವು ಸಿಗುತ್ತಿದೆ ಆದ್ದರಿಂದ ಯಾರಾದರೂ ಮರಣ ಹೊಂದಿದರೂ ಸಹ ನಿಮಗೆ ಚಿಂತೆಯಾಗುವುದಿಲ್ಲ. ತಾಯಿ ಸತ್ತರೂ ಸಹ ಜ್ಞಾನದ ಹಲ್ವ ತಿನ್ನಿ...... (ಸಹೋದರಿ ಶಾಂತಾರವರಂತೆ) ಆ ಮಗುವು ಹೋಗಿ ಅವರಿಗೆ ತಿಳಿಸಿತು - ನೀವೇಕೆ ಅಳುತ್ತೀರಿ? ಅವರಂತೂ ಹೋಗಿ ಇನ್ನೊಂದು ಶರೀರವನ್ನು ತೆಗೆದುಕೊಂಡರು. ಅಳುವುದರಿಂದ ಪುನಃ ಹಿಂತಿರುಗಿ ಬರುತ್ತಾರೆಯೇ? ಭಾಗ್ಯಶಾಲಿಗಳು ಎಂದೂ ಅಳುವುದಿಲ್ಲ. ಹೀಗೆ ಅಲ್ಲಿ ಎಲ್ಲರು ಅಳುವುದನ್ನು ನಿಲ್ಲಿಸಿ ನಂತರ ತಿಳಿಸತೊಡಗಿದರು. ಹೀಗೆ ಅನೇಕ ಮಕ್ಕಳು ಹೋಗಿ ತಿಳಿಸುತ್ತಾರೆ. ಈಗ ಅಳುವುದನ್ನು ನಿಲ್ಲಿಸಿ. ಬ್ರಾಹ್ಮಣರಿಗೆ ತಿನ್ನಿಸುವುದನ್ನೂ ನಿಲ್ಲಿಸಿ. ನಾವು ಸತ್ಯ ಬ್ರಾಹ್ಮಣರನ್ನು ಕರೆ ತರುತ್ತೇವೆ. ಮತ್ತೆ ಜ್ಞಾನವನ್ನು ಕೇಳತೊಡಗುತ್ತಾರೆ. ಇವರು ಸರಿಯಾದುದನ್ನೇ ಹೇಳುತ್ತಾರೆಂದು ತಿಳಿದು ಜ್ಞಾನವನ್ನು ಕೇಳುತ್ತಾ-ಕೇಳುತ್ತಾ ಶಾಂತವಾಗಿ ಬಿಡುತ್ತಾರೆ. ಏಳು ದಿನಗಳಿಗಾಗಿ ಕೆಲವರು ಭಾಗವತ ಇತ್ಯಾದಿಗಳನ್ನಿಡುತ್ತಾರೆ ಆದರೂ ಮನುಷ್ಯರ ದುಃಖವು ದೂರವಾಗುವುದಿಲ್ಲ. ಈ ಮಕ್ಕಳು ಎಲ್ಲರ ದುಃಖವನ್ನು ದೂರ ಮಾಡುತ್ತಾರೆ. ನೀವು ತಿಳಿದುಕೊಂಡಿದ್ದೀರಿ, ಇದು ಮಾಡಿ-ಮಾಡಲ್ಪಟ್ಟ ನಾಟಕವಾಗಿದೆ. ಅಳುವ ಅವಶ್ಯಕತೆಯೇ ಇಲ್ಲ. ಪ್ರತಿಯೊಬ್ಬರೂ ತಮ್ಮ ಪಾತ್ರವನ್ನಭಿನಯಿಸಬೇಕಾಗಿದೆ. ಯಾವುದೇ ಪರಿಸ್ಥಿತಿಯಲ್ಲಿ ಅಳಬಾರದು. ಬೇಹದ್ದಿನ ತಂದೆ, ಶಿಕ್ಷಕ, ಸದ್ಗುರು ಸಿಕ್ಕಿದ್ದಾರೆ. ಅವರಿಗಾಗಿಯೇ ನೀವು ಎಷ್ಟೊಂದು ಅಲೆದಾಡಿದಿರಿ. ಪರಬ್ರಹ್ಮದಲ್ಲಿರುವ ಪರಮಪಿತ ಪರಮಾತ್ಮನೇ ಸಿಕ್ಕಿಬಿಟ್ಟರು ಅಂದಮೇಲೆ ಇನ್ನೇನು ಬೇಕು? ತಂದೆಯು ಸುಖದ ಆಸ್ತಿಯನ್ನೇ ಕೊಡುತ್ತಾರೆ. ನೀವು ತಂದೆಯನ್ನು ಮರೆತು ಹೋಗುತ್ತೀರಿ ಆದ್ದರಿಂದ ಅಳಬೇಕಾಗುತ್ತದೆ. ತಂದೆಯನ್ನು ನೆನಪು ಮಾಡಿದರೆ ಖುಷಿಯಿರುವುದು - ಓಹೋ ನಾವಂತೂ ವಿಶ್ವದ ಮಾಲೀಕರಾಗುತ್ತೇವೆ, ಮತ್ತೆ 21 ಜನ್ಮಗಳವರೆಗೆ ಎಂದೂ ಅಳುವುದಿಲ್ಲ. 21 ಪೀಳಿಗೆಗಳು ಅರ್ಥಾತ್ ಆಯಸ್ಸು ಪೂರ್ಣವಾಗುವವರೆಗೆ ಅಕಾಲ ಮೃತ್ಯುವಾಗುವುದಿಲ್ಲ. ಅಂದಮೇಲೆ ಒಳಗೆ ಎಷ್ಟೊಂದು ಗುಪ್ತ ಖುಷಿಯಿರಬೇಕು!

ನೀವು ತಿಳಿದುಕೊಂಡಿದ್ದೀರಿ - ಮಾಯೆಯ ಮೇಲೆ ಜಯ ಗಳಿಸಿ ಜಗಜ್ಜೀತರಾಗುತ್ತೇವೆ. ಆಯುಧಗಳು ಮೊದಲಾದುದರ ಯಾವುದೇ ಮಾತಿಲ್ಲ. ನೀವು ಶಿವನ ಶಕ್ತಿಯರಾಗಿದ್ದೀರಿ. ನಿಮ್ಮ ಬಳಿ ಜ್ಞಾನದ ಕತ್ತಿ, ಜ್ಞಾನದ ಬಾಣಗಳಿವೆ. ಇದಕ್ಕಾಗಿ ಮನುಷ್ಯರು ಭಕ್ತಿ ಮಾರ್ಗದಲ್ಲಿ ದೇವಿಯರಿಗೆ ಸ್ಥೂಲ ಬಾಣ, ಖಡ್ಗ ಇತ್ಯಾದಿಗಳನ್ನು ತೋರಿಸಿದ್ದಾರೆ. ತಂದೆಯು ತಿಳಿಸುತ್ತಾರೆ - ಜ್ಞಾನದ ಕತ್ತಿಯಿಂದ ವಿಕಾರಗಳನ್ನು ಗೆಲ್ಲಬೇಕಾಗಿದೆ ಬಾಕಿ ದೇವಿಯರೇನು ಹಿಂಸಕರಲ್ಲ. ಇದೆಲ್ಲವೂ ಭಕ್ತಿ ಮಾರ್ಗವಾಗಿದೆ. ಸಾಧು-ಸಂತ ಮೊದಲಾದವರು ನಿವೃತ್ತಿ ಮಾರ್ಗದವರಾಗಿದ್ದಾರೆ. ಅವರು ಪ್ರವೃತ್ತಿ ಮಾರ್ಗದವರನ್ನು ಒಪ್ಪುವುದೇ ಇಲ್ಲ. ನೀವಂತೂ ಹಳೆಯ ಪ್ರಪಂಚ, ಹಳೆಯ ಶರೀರದ ಸನ್ಯಾಸ ಮಾಡುತ್ತೀರಿ, ಈಗ ತಂದೆಯನ್ನು ನೆನಪು ಮಾಡಿದರೆ ಆತ್ಮವು ಪವಿತ್ರವಾಗುವುದು, ಜ್ಞಾನದ ಸಂಸ್ಕಾರವನ್ನು ತೆಗೆದುಕೊಂಡು ಹೋಗುತ್ತೀರಿ. ಅದರನುಸಾರವಾಗಿ ಹೊಸ ಪ್ರಪಂಚದಲ್ಲಿ ಜನ್ಮ ಪಡೆಯುತ್ತೀರಿ. ಇಲ್ಲಿ

ಜನ್ಮ ಪಡೆದರೂ ಸಹ ಯಾವುದೇ ಒಳ್ಳೆಯ ಮನೆಯಲ್ಲಿ ರಾಜನ ಬಳಿ ಅಥವಾ ಒಳ್ಳೆಯ ಧಾರ್ಮಿಕ ಮನೆಯಲ್ಲಿ ಆ ಸಂಸ್ಕಾರವನ್ನು ತೆಗೆದುಕೊಂಡು ಹೋಗುತ್ತೀರಿ. ಅಲ್ಲಿ ಎಲ್ಲರಿಗೂ ಪ್ರಿಯರಾಗುತ್ತೀರಿ. ಇವರಂತೂ ದೇವಿಯಾಗಿದ್ದಾರೆಂದು ಹೇಳುತ್ತಾರೆ. ಕೃಷ್ಣನಿಗೆ ಎಷ್ಟೊಂದು ಮಹಿಮೆ ಮಾಡುತ್ತಾರೆ. ಬಾಲ್ಯದಲ್ಲಿ ಬೆಣ್ಣೆಕದ್ದ, ಮಡಿಕೆಯನ್ನು ಹೊಡೆದ.... ಎಂದು ತೋರಿಸುತ್ತಾರೆ. ಎಷ್ಟೊಂದು ಕಳಂಕಗಳನ್ನು ಹೊರಿಸಿದ್ದಾರೆ. ಒಳ್ಳೆಯದು - ಮತ್ತೆ ಕೃಷ್ಣನನ್ನು ಮತ್ತೇಕೆ ಕಪ್ಪಾಗಿ ತೋರಿಸಿದ್ದಾರೆ? ಅಲ್ಲಂತೂ ಕೃಷ್ಣನು ಸುಂದರನಾಗಿರುತ್ತಾನೆ. ನಂತರ ಶರೀರವು ಬದಲಾಗುತ್ತಾ ಹೆಸರೂ ಬದಲಾಗುತ್ತಿರುತ್ತದೆ. ಶ್ರೀಕೃಷ್ಣನು ಸತ್ಯಯುಗದ ಮೊದಲ ರಾಜ ಕುಮಾರನಾಗಿದ್ದನು. ಅವನನ್ನು ಏಕೆ ಕಪ್ಪಾಗಿ ಮಾಡಿದ್ದಾರೆ? ಇದನ್ನು ಎಂದೂ ಯಾರೂ ತಿಳಿಸಲು ಸಾಧ್ಯವಿಲ್ಲ. ಅಲ್ಲಿ ಕೃಷ್ಣನನ್ನು ಕಪ್ಪು ಮಾಡಲು ಸರ್ಪ ಇತ್ಯಾದಿಗಳೇನೂ ಇರುವುದಿಲ್ಲ, ಎಲ್ಲಿ ವಿಷವು ಏರಿದೆಯೋ ಅಲ್ಲಿ ಕಪ್ಪಾಗಿ ಬಿಡುತ್ತಾರೆ. ಸತ್ಯಯುಗದಲ್ಲಂತೂ ಇಂತಹ ಮಾತುಗಳಿರುವುದಿಲ್ಲ. ನೀವೀಗ ದೈವೀ ಸಂಪ್ರದಾಯದವರಾಗುತ್ತಿದ್ದೀರಿ. ಈ ಬ್ರಾಹ್ಮಣ ಸಂಪ್ರದಾಯದ ಬಗ್ಗೆ ಯಾರಿಗೂ ತಿಳಿದಿಲ್ಲ. ಮೊಟ್ಟ ಮೊದಲು ತಂದೆಯು ಬ್ರಹ್ಮಾರವರ ಮೂಲಕ ಬ್ರಾಹ್ಮಣರನ್ನು ದತ್ತು ಮಾಡಿಕೊಳ್ಳುತ್ತಾರೆ. ಪ್ರಜಾಪಿತ ಬ್ರಹ್ಮಾನಿದ್ದಾರೆಂದ ಮೇಲೆ ಅವರ ಪ್ರಜೆಗಳೂ ಅನೇಕರಿದ್ದಾರೆ. ಬ್ರಹ್ಮಾನ ಮಗಳು ಸರಸ್ವತಿಯೆಂದು ಹೇಳುತ್ತಾರೆ, ಬ್ರಹ್ಮಾನ ಸ್ತ್ರೀ ಅಲ್ಲ, ಇದು ಯಾರಿಗೂ ತಿಳಿದಿಲ್ಲ. ಪ್ರಜಾಪಿತ ಬ್ರಹ್ಮಾನಿಗೆ ಮುಖ ವಂಶಾವಳಿಯಿದ್ದಾರೆ. ಸ್ತ್ರೀಯ ಮಾತಿಲ್ಲ, ತಂದೆಯು ಇವರಲ್ಲಿ ಪ್ರವೇಶ ಮಾಡಿ ಹೇಳುತ್ತಾರೆ - ನೀವು ನನ್ನ ಮಕ್ಕಳಾಗಿದ್ದೀರಿ, ನಾನು ಇವರಿಗೆ ಬ್ರಹ್ಮಾನೆಂದು ಹೆಸರನ್ನಿಟ್ಟಿದ್ದೇನೆ. ಯಾರೆಲ್ಲಾ ಮಕ್ಕಳಿದ್ದಾರೋ ಎಲ್ಲರ ಹೆಸರನ್ನು ಬದಲಾಯಿಸಿದರು. ನೀವು ಮಕ್ಕಳು ಈಗ ಮಾಯೆಯ ಮೇಲೆ ಜಯ ಗಳಿಸುತ್ತೀರಿ, ಇದಕ್ಕೆ ಸೋಲು ಮತ್ತು ಗೆಲುವಿನ ಆಟವೆಂದು ಹೇಳಲಾಗುತ್ತದೆ. ತಂದೆಯು ಎಷ್ಟು ಸಸ್ತಾ ವ್ಯಾಪಾರ ಮಾಡಿಸುತ್ತಾರೆ ಆದರೂ ಸಹ ಮಾಯೆಯು ಸೋಲಿಸಿ ಬಿಡುತ್ತದೆ ಮತ್ತೆ ಹೊರಟು ಹೋಗುತ್ತಾರೆ. ಪಂಚ ವಿಕಾರಗಳೆಂಬ ಮಾಯೆಯು ಸೋಲಿಸುತ್ತದೆ. ಯಾರಲ್ಲಿ ಪಂಚ ವಿಕಾರಗಳಿವೆಯೋ ಅವರನ್ನು ಅಸುರೀ ಸಂಪ್ರದಾಯದವರೆಂದು ಹೇಳಲಾಗುತ್ತದೆ. ಮಂದಿರಗಳಲ್ಲಿ ದೇವಿಯರ ಮುಂದೆ ಹೋಗಿ ಮಹಿಮೆಯನ್ನು ಹಾಡುತ್ತಾರೆ - ತಾವು ಸರ್ವ ಗುಣ ಸಂಪನ್ನರು..... ತಂದೆಯು ನೀವು ಮಕ್ಕಳಿಗೆ ತಿಳಿಸುತ್ತಾರೆ - ನೀವೇ ಪೂಜ್ಯ ದೇವತೆಗಳಾಗಿದ್ದಿರಿ ಮತ್ತೆ ನೀವೇ 63 ಜನ್ಮಗಳು ಪೂಜಾರಿಯಾದಿರಿ, ಈಗ ಪುನಃ ಪೂಜ್ಯರಾಗುತ್ತೀರಿ. ತಂದೆಯು ಪೂಜ್ಯರನ್ನಾಗಿ, ರಾವಣನು ಪೂಜಾರಿಗಳನ್ನಾಗಿ ಮಾಡುತ್ತಾನೆ. ಈ ಮಾತುಗಳು ಯಾವುದೇ ಶಾಸ್ತ್ರಗಳಲ್ಲಿಲ್ಲ. ತಂದೆಯು ಯಾವುದೇ ಶಾಸ್ತ್ರಗಳನ್ನು ಓದಿಲ್ಲ. ಅವರು ಜ್ಞಾನ ಸಾಗರ, ಸರ್ವ ಶಕ್ತಿವಂತನಾಗಿದ್ದಾರೆ. ಆಲ್ಮೈಟಿ ಎಂದರೆ ಸರ್ವ ಶಕ್ತಿವಂತನೆಂದರ್ಥ. ತಂದೆಯು ತಿಳಿಸುತ್ತಾರೆ - ನಾನು ಎಲ್ಲಾ ವೇದ ಶಾಸ್ತ್ರಗಳನ್ನು ತಿಳಿದುಕೊಂಡಿದ್ದೇನೆ, ಇದೆಲ್ಲವೂ ಭಕ್ತಿಮಾರ್ಗದ ಸಾಮಗ್ರಿಯಾಗಿದೆ. ನಾನು ಇವೆಲ್ಲಾ ಮಾತುಗಳನ್ನು ತಿಳಿದುಕೊಂಡಿದ್ದೇನೆ. ದ್ವಾಪರದಿಂದಲೇ ನೀವು ಪೂಜಾರಿಗಳಾಗುತ್ತೀರಿ. ಸತ್ಯ-ತ್ರೇತಾಯುಗದಲ್ಲಿ ಪೂಜೆಯಿರುವುದಿಲ್ಲ. ಅದು ಪೂಜ್ಯ ಮನೆತನವಾಗಿದೆ. ನಂತರ ಪೂಜಾರಿ ಮನೆತನವಾಗುತ್ತದೆ. ಈ ಸಮಯದಲ್ಲಿ ಎಲ್ಲರೂ ಪೂಜಾರಿಗಳಾಗಿದ್ದಾರೆ. ಈ ಮಾತುಗಳು ಯಾರಿಗೂ ತಿಳಿದಿಲ್ಲ. ಆದ್ದರಿಂದ ತಂದೆಯೇ ಬಂದು 84 ಜನ್ಮಗಳ ಕಥೆಯನ್ನು ತಿಳಿಸುತ್ತಾರೆ. ಪೂಜ್ಯ ಮತ್ತು ಪೂಜಾರಿ ಇಡೀ ಆಟವೆಲ್ಲವೂ ನಿಮ್ಮ ಮೇಲೆಯೇ ಇದೆ. ಹಿಂದೂ ಧರ್ಮವೆಂದು ಹೇಳಿ ಬಿಡುತ್ತಾರೆ. ವಾಸ್ತವದಲ್ಲಿ ಭಾರತದಲ್ಲಿ ಆದಿ ಸನಾತನ ದೇವಿ-ದೇವತಾ ಧರ್ಮವಿತ್ತು, ಹಿಂದೂ ಧರ್ಮವಲ್ಲ. ಇಷ್ಟೊಂದು ಮಾತುಗಳನ್ನು ತಿಳಿಸಬೇಕಾಗುತ್ತದೆ. ಈ ವಿದ್ಯೆಯು ಒಂದು ಸೆಕೆಂಡಿನದಾಗಿದೆ, ಆದರೂ ಎಷ್ಟೊಂದು ಸಮಯ ಹಿಡಿಸುತ್ತದೆ. ಸಾಗರವನ್ನು ಶಾಹಿಯನ್ನಾಗಿ ಮಾಡಿಕೊಂಡು ಇಡೀ ಗಿಡ ಮರಗಳನ್ನು ಲೇಖನಿಯನ್ನಾಗಿ ಮಾಡಿ ಬರೆದರೂ ಇದು ಪೂರ್ಣವಾಗುವುದಿಲ್ಲ ಎಂದು ಹೇಳುತ್ತಾರೆ ಅಂದರೆ ಅಂತ್ಯದವರೆಗೆ ನಿಮಗೆ ಜ್ಞಾನವನ್ನು ತಿಳಿಸುತ್ತಾ ಇರುತ್ತೇವೆ. ನೀವು ಇದರ ಎಷ್ಟೊಂದು ಪುಸ್ತಕಗಳನ್ನು ಮಾಡಿಸುತ್ತೀರಿ. ಆರಂಭದಲ್ಲಿಯೂ ಬಾಬಾರವರು ಬೆಳಗ್ಗೆ-ಬೆಳಗ್ಗೆ ಎದ್ದು ಬರೆಯುತ್ತಿದ್ದರು ನಂತರ ಅದನ್ನು ಮಮ್ಮಾರವರು ತಿಳಿಸುತ್ತಿದ್ದರು. ಆಗಿನಿಂದ ಹಿಡಿದು ಎಲ್ಲವೂ ಮುದ್ರಣವಾಗುತ್ತಾ ಬರುತ್ತಿದೆ. ಎಷ್ಟೊಂದು ಕಾಗದಗಳು ಸಮಾಪ್ತಿಯಾಗಿಬರಬಹುದು. ಗೀತೆಯು ಒಂದೇ ಅದು ಬಹಳ ಚಿಕ್ಕದಾಗಿದೆ. ಗೀತೆಯ ಲಾಕೆಟ್ಟನ್ನೂ ಮಾಡಿಸಿಕೊಳ್ಳುತ್ತಾರೆ. ಗೀತೆಯ ಬಹಳ ಪ್ರಭಾವವಿದೆ ಆದರೆ ಗೀತಾ ಜ್ಞಾನ ದಾತನನ್ನೇ ಮರೆತು ಹೋಗಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಜ್ಞಾನದ ಖಡ್ಗದಿಂದ ವಿಕಾರಗಳನ್ನು ಜಯಿಸಬೇಕಾಗಿದೆ. ಜ್ಞಾನದ ಸಂಸ್ಕಾರವನ್ನು ತುಂಬಿಕೊಳ್ಳಬೇಕಾಗಿದೆ. ಹಳೆಯ ಪ್ರಪಂಚ ಮತ್ತು ಹಳೆಯ ಶರೀರದ ಸನ್ಯಾಸ ಮಾಡಬೇಕಾಗಿದೆ.

2. ಭಾಗ್ಯವಂತರಾಗುವ ಖುಷಿಯಲ್ಲಿರಬೇಕಾಗಿದೆ. ಯಾವುದೇ ಮಾತಿನ ಚಿಂತೆ ಮಾಡಬಾರದಾಗಿದೆ. ಯಾರಾದರೂ ಶರೀರ ಬಿಟ್ಟರೂ ಸಹ ದುಃಖದ ಕಣ್ಣೀರು ಬರಬಾರದು.

ವರದಾನ: ಕಂಟ್ರೋಲಿಂಗ್ ಪವರ್ ಮೂಲಕ ಒಂದು ಸೆಕೆಂಡ್ನ ಪೇಪರ್ನಲ್ಲಿ ಪಾಸ್ ಆಗುವಂತಹ ಪಾಸ್ ವಿತ್ ಆನರ್ ಭವ.

ಈಗೀಗ ಶರೀರದಲ್ಲಿ ಬರುವುದು ಮತ್ತು ಈಗೀಗ ಶರೀರದಿಂದ ನ್ಯಾರೆ ಆಗಿ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಬಿಡುವುದು. ಎಷ್ಟೇ ಕೋಲಾಹಲವಿರಲಿ ಅಷ್ಟೂ ಸ್ವಯಂನ ಸ್ಥಿತಿ ಅತೀ ಶಾಂತಿಯಿಂದಿರಲಿ, ಇದಕ್ಕಾಗಿ ಒಟ್ಟುಗೂಡಿಸುವ ಶಕ್ತಿ (ಸಮೇಟನೆಕಿ ಶಕ್ತಿ) ಯ ಅವಶ್ಯಕತೆಯಿದೆ. ಒಂದು ಸೆಕೆಂಡ್ನಲ್ಲಿ ವಿಸ್ತಾರದಿಂದ ಸಾರದಲ್ಲಿ ಬಂದು ಬಿಡಬೇಕು ಮತ್ತು ಒಂದು ಸೆಕೆಂಡ್ನಲ್ಲಿ ಸಾರದಿಂದ ವಿಸ್ತಾರದಲ್ಲಿ ಬರುವುದು, ಈ ರೀತಿಯ ಕಂಟ್ರೋಲಿಂಗ್ ಪವರ್ ಉಳ್ಳವರೇ ವಿಶ್ವವನ್ನು ಕಂಟ್ರೋಲ್ ಮಾಡಲು ಸಾಧ್ಯ. ನಂತರ ಇದೇ ಅಭ್ಯಾಸ ಅಂತಿಮ ಒಂದು ಸೆಕೆಂಡ್ ನ ಪೇಪರ್ ನಲ್ಲಿ ಪಾಸ್ ವಿತ್ ಆನರ್ ಆಗಿ ಮಾಡಿ ಬಿಡುವುದು.

ಸ್ಲೋಗನ್: ವಾನಪ್ರಸ್ಥ ಸ್ಥಿತಿಯ ಅನುಭವ ಮಾಡಿ ಮತ್ತು ಮಾಡಿಸಿ ಆಗ ಬಾಲ್ಯತನದ ಆಟ ಸಮಾಪ್ತಿಯಾಗಿ ಬಿಡುವುದು.

ಅವ್ಯಕ್ತ ಸೂಚನೆ:- ಅಶರೀರಿ ಅಥವಾ ವಿದೇಹಿ ಸ್ಥಿತಿಯ ಅಭ್ಯಾಸ ಹೆಚ್ಚಿಸಿ.

ವಿದೇಹಿ ಆಗುವುದರಲ್ಲಿ "ಹೇ ಅರ್ಜುನ ಆಗಿ" ಅರ್ಜುನನ ವಿಶೇಷತೆ - ಸದಾ ಬಿಂದು ಸ್ವರೂಪ ಆಗಿ ವಿಜಯೀ ಆಗುವುದು. ಈ ರೀತಿ ನಷ್ಟೋ ಮೋಹ ಸ್ಮೃತಿ ಸ್ವರೂಪ ಅಗಿರುವವರು ಅರ್ಜುನ. ಸದಾ ಗೀತಾ ಜ್ಞಾನವನ್ನು ಕೇಳುವವರು ಹಾಗು ಮನನ ಮಾಡುವವರು ಅರ್ಜುನ. ಈ ರೀತಿ ವಿದೇಹೀ, ಬದುಕಿದ್ದಂತೆಯೇ ಎಲ್ಲರು ಸತ್ತು ಹೋಗಿದ್ದಾರೆ, ಇಂತಹ ಬೇಹದ್ದಿನ ವೈರಾಗಿ ವೃತ್ತಿಯವರು ಅರ್ಜುನರಾಗಿ.